ಅಪರಾಧಕ್ಕೆ ಸಂಬಂಧಿಸಿದ ಕಾರ್ಯಕ್ರಮ ನಡೆಯುತ್ತಿತ್ತು. ಒಂದು ಚಾನಲ್‌ನಲ್ಲಿ ಅತ್ತೆ ಸೊಸೆಯ ಜಗಳ, ಜಗಳದ ನಡುವೆ ಷಡ್ಯಂತ್ರವನ್ನು ತೋರಿಸಲಾಗುತ್ತಿತ್ತು. ಇನ್ನೊಂದರಲ್ಲಿ ನೃತ್ಯಕಲೆಯನ್ನು ಕಲಿಸಲಾಗುತ್ತಿತ್ತು. ನಾನು ಒಂದು ಚಾನಲ್ ಆರಿಸಿಕೊಳ್ಳಲು ಬಯಸುತ್ತಿದ್ದೆ, ಆದರೆ ಇದು ಸಾಧ್ಯವಾಗುತ್ತಿರಲಿಲ್ಲ.

‘ಟಿಂಗ್‌ಟಾಂಗ್’, ಬಾಗಿಲ ಗಂಟೆ ಬಾರಿಸಿತು. ನಾನು ಗಾಬರಿಯಾದೆ, ಈ ವೇಳೆಯಲ್ಲಿ ಯಾರಿರಬಹುದು? ಗಡಿಯಾರ ನೋಡಿದೆ. ಎಂಟು ಗಂಟೆ ಮೂವತ್ತೈದು ನಿಮಿಷ ಆಗುವುದರಲ್ಲಿತ್ತು.

‘ಟಿಂಗ್‌ಟಾಂಗ್’ ಮತ್ತೆ ಬೆಲ್ ಬಾರಿಸಿತು.

‘ಯಾರು?’ ಬಾಗಿಲು ತೆರೆಯುವುದಕ್ಕೆ ಮೊದಲು ವಿಚಾರಿಸುವುದು ಉಚಿತವೆಂದು ತಿಳಿದೆ.

‘ನಾನು! ವಿಶಾಲ್ ಪಟೇಲ್’ ಇದು ವಿಶಾಲನ ಧ್ವನಿಯಾಗಿತ್ತು.

ಅವನ ಧ್ವನಿ ಕೇಳಿ ಸಂತಸದೊಂದಿಗೆ ಆಶ್ಚರ್ಯವೂ ಆಯಿತು. ಅವನು ಇಷ್ಟು ತಡವಾಗಿ ಎಂದೂ ಬಂದಿರಲಿಲ್ಲ, ಹೀಗಾಗಿ ಆಶ್ಚರ್ಯವಾಗುವುದು ಸಹಜವಾಗಿತ್ತು. ನಾನು ಬಾಗಿಲು ತೆರೆದೆ.

‘ಬನ್ನಿ’

‘ಕ್ಷಮಿಸಿ, ಬರೋದು ತಡವಾಯ್ತು. ಬ್ಯಾಂಕಿನಿಂದ ಏಳೂ ಮುಕ್ಕಾಲಿಗೆ ಬಿಡುಗಡೆಯಾಗಿದ್ದೇನೆ. ನಿಮಗೆ ಫೋನ್ ಮಾಡಿ ಕ್ಷಮೆ ಯಾಚಿಸಲು ಯೋಚಿಸಿದೆ, ಕಡೆಗೆ ಎರಡು ನಿಮಿಷ ಮನೆಗೆ ಹೋಗಿಯೇ ಕ್ಷಮೆಯನ್ನು ಯಾಚಿಸಬೇಕೆಂದು ಅನ್ನಿಸಿತು’, ವಿಶಾಲ ಕೋಣೆಯನ್ನು ಪ್ರವೇಶಿಸುತ್ತಾ ಹೇಳಿದ. ಅವನು ದಣಿದಿರುವಂತೆ ತೋರುತ್ತಿತ್ತು.

‘ಖಂಡಿತ ನಿಮಗೆ ಲೇಟಾಯ್ತು’ ಎಂದೆ.

‘ಹೌದು, ನನಗೆ ಹಸಿವೆಯೂ ಆಗಿತ್ತು. ಅದಕ್ಕೇ ಎರಡು ಬರ್ಗರ್ ಕಟ್ಟಿಸಿಕೊಂಡು ಬಂದಿದ್ದೇನೆ. ಒಂದು ನಿಮಗೆ, ಇನ್ನೊಂದು ನನಗೆ’, ವಿಶಾಲ್ ಒಂದು ಪ್ಯಾಕೇಟನ್ನು ನನ್ನೆಡೆಗೆ ಚಾಚಿದ.

‘ಒಳ್ಳೆಯದನ್ನು ಮಾಡಿದಿರಿ, ನಾನಂತೂ ನಿಮಗೆ ತಿನ್ನಲು ಏನೂ ಕೊಡುವುದಿಲ್ಲ’, ನಾನು ತಮಾಷೆ ಮಾಡಿದೆ.

‘ಹಾಗಲ್ಲ, ನಾನೇಕೆ ನಿಮಗೆ ತೊಂದ್ರೆ ಕೊಡಬೇಕು ಅಂತ ಯೋಚಿಸಿದೆ’ ಎಂದ ವಿಶಾಲ್.



‘ಆದ್ರೆ ನೀವೀಗ ಒಂದು ತೊಂದ್ರೆ ತಗೋಬೇಕು’ ಎಂದೆ.

‘ಹೂಂಹೂಂ, ಹೇಳಿ’ ಅವನು ಉತ್ಸಾಹ ತೋರಿದ.

‘ನೀವು ನಾನು ಮಾಡಿದ ಕಿಚಡಿ ತಿನ್ನಬೇಕು. ನೀವು ಕಿಚಡಿ ತಿನ್ನುವುದರಲ್ಲಿ ನನಗೆ ಸಹಕರಿಸಿದರೆ, ನಾನು ಬರ್ಗರ್ ತಿನ್ನುವಲ್ಲಿ ನಿಮಗೆ ಸಹಕರಿಸುತ್ತೇನೆ. ಇಲ್ಲದಿದ್ದರೆ, ಎರಡೂ ಬರ್ಗರ್ ನೀವೇ ತಿನ್ನಬೇಕಾಗುತ್ತೆ’ ಎಂದೆ.

‘ಓಹ್, ಕಿಚಡಿ ನನಗೆ ತುಂಬಾ ಇಷ್ಟ’.

‘ಕಿಚಡಿ ಸ್ವಾದಿಷ್ಟವಾಗಿದೆಯೋ, ಇಲ್ಲವೋ ಎಂಬುದು ತಿಂದ ನಂತರವಷ್ಟೇ ತಿಳಿಯುತ್ತದೆ’.

‘ಸರಿ, ಮೊದಲು ಕಿಚಡಿ ತಿನ್ನೋಣ, ಆಮೇಲೆ ಬರ್ಗರ್’.

‘ನೀವು ಕೂತ್ಕೊಳ್ಳಿ, ನಾನು ಕಿಚಡಿ ತರ್ತೀನಿ’.

ನಾನು ಕಿಚಡಿಯನ್ನು ಒಂದು ಬಟ್ಟಲಿಗೆ ಹಾಕಿ ತರುವಷ್ಟರಲ್ಲಿ ವಿಶಾಲ್ ಸುದ್ದಿ ಬಿತ್ತರವಾಗುತ್ತಿದ್ದ ಒಂದು ಚಾನಲ್ ಹಾಕಿ, ಅದನ್ನು ನೋಡುತ್ತಿದ್ದ.

‘ಈಚೆಗೆ ಯಾವುದೇ ವಿಶೇಷ ಸುದ್ದಿಗಳು ಇರುವುದಿಲ್ಲ. ಅದೇ ಹಳೆ ಸುದ್ದಿಗಳು. ಹೆಚ್ಚೆಂದರೆ ಯಾವುದಾದ್ರು ಅಪರಾಧ ಸುದ್ದಿಯನ್ನು ಇನ್ನಷ್ಟು ರೋಚಕವಾಗಿ ಉಣಬಡಿಸುತ್ತಾರೆ’, ಎಂದ ವಿಶಾಲ್.

‘ಹೂಂ, ಒಂದು ಫುಟೇಜ್ ಕ್ಲಿಪ್ಪನ್ನು ಅದೆಷ್ಟು ಬಾರಿ ರಿಪೀಟ್ ಮಾಡ್ತಾರೆಂದರೆ, ನೋಡುವವರು ಹುಚ್ಚರಾಗ್ತಾರೆ’, ನಾನು ಅವನ ಮಾತನ್ನು ಸಮರ್ಥಿಸಿದೆ.

‘ಆದ್ರೂ ನೀವು ಹುಚ್ಚರಾಗಲ್ಲ’.

‘ಅದಕ್ಕೂ ಮೊದಲು ಚಾನಲ್ ಚೇಂಜ್ ಮಾಡ್ತೀವಲ್ಲ’.

‘ವಾಹ್! ಕಿಚಡಿ ತುಂಬಾ ಸ್ವಾದಿಷ್ಟವಾಗಿದೆ’.

‘ಸುಳ್ಳೇ ಹೊಗಳಬೇಡಿ’.

‘ನಾನು ಸುಳ್ಳು ಹೇಳ್ತಿಲ್ಲ. ಕ್ಯಾರೆಟ್, ಬಟಾಣಿ ಮತ್ತು ಟೊಮ್ಯಾಟೊ ಇವು ಕಿಚಡಿಯನ್ನು ತುಂಬಾ ಸ್ವಾದಿಷ್ಟ ಮಾಡಿದೆ. ನಾನು ಸಾದಾ ಕಿಚಡಿ ಅಂತ ಯೋಚಿಸಿದ್ದೆ’.

ಅವನ ಮಾತು ಕೇಳಿ ನನಗೆ ಹಿತವೆನಿಸಿತು. ಕಿಚಡಿ ತಿಂದ ಹತ್ತು ನಿಮಿಷಗಳ ನಂತರ ಬರ್ಗರ್ ತಿನ್ನಲು ನಿರ್ಧರಿಸಲಾಯಿತು. ಎರಡರ ರುಚಿಯನ್ನು ಅರಿಯಲು ಹೀಗೆ ಮಾಡಲಾಯಿತು. ಆ ಹತ್ತು ನಿಮಿಷ ಒಂದು ಗಂಟೆಯಲ್ಲಿ ಹೇಗೆ ಬದಲಾಯಿತೋ, ತಿಳಿಯಲಿಲ್ಲ. ಏಕೆಂದರೆ ನಾವಿಬ್ಬರು ಪೌರಾಣಿಕ ಕಥೆಗಳಲ್ಲಿ ಹೆಣ್ಣನ್ನು ‘ಸತಿ’ ಎಂದು ಹೇಳಲಾಗುವ ಬಗ್ಗೆ ಚರ್ಚೆಯನ್ನು ಆರಂಭಿಸಿದ್ದೆವು. ಈ ಬಗ್ಗೆ ನಂತರದಲ್ಲಿ ನಮ್ಮಿಬ್ಬರ ಅಭಿಪ್ರಾಯಗಳು ಸುಮಾರಾಗಿ ಒಂದೇ ತೆರನಾಗಿದ್ದವು. ನಂತರ ಐತಿಹಾಸಿಕ ಪ್ರವಾಸಿ ಸ್ಥಳಗಳ ಬಗ್ಗೆ ಮಾತು ಆರಂಭವಾಯಿತು. ವಿಶಾಲ ಯಾವುದೋ ಒಂದು ಸ್ಥಳದಲ್ಲಿ ‘ಸತಿ ಕಲ್ಲು’ ನೋಡಿದ್ದ.

‘ಆ ಕಲ್ಲಿನ ಮೇಲೆ ಒಂದು ಅಂಗೈ ಕೆತ್ತಲಾಗಿತ್ತು; ಆ ಅಂಗೈನ ಒಂದು ಕಡೆ ಚಂದ್ರ ಮತ್ತು ಇನ್ನೊಂದು ಕಡೆ ಸೂರ್ಯ ಇದ್ದ. ಅದು ತುಂಬಾ ಕಲಾತ್ಮಕವಾಗಿತ್ತು’ ಎಂದ ವಿಶಾಲ್.

‘ಯಾವುದೋ ಹೆಣ್ಣನ್ನು ಜೀವಂತವಾಗಿ ಸುಡಲಾದ ಗುರುತನ್ನು ನೀವು ಕಲಾತ್ಮಕ ಎನ್ನುತ್ತೀರ?’ ಎಂದೆ. ನಾನು ವಿಶಾಲನನ್ನು ಭೇಟಿಯಾಗುವುದಕ್ಕೆ ಮೊದಲು ಋಷಭನೊಂದಿಗೆ ಸಾಗರದ ಗುಪ್ತಕಾಲದ ಐತಿಹಾಸಿಕ ಸ್ಥಳ ಎರಣ್ ಮತ್ತು ಅದರ ಅಕ್ಕಪಕ್ಕದ ಪ್ರದೇಶಗಳಲ್ಲಿ ಸುತ್ತಾಡಿ ಬಂದಿದ್ದೆ. ಋಷಭ್ ಆ ಸ್ಥಳಗಳ ಬಗ್ಗೆ ಚರ್ಚಿಸಿದಾಗ, ಅವುಗಳನ್ನು ನೋಡುವ ಇಚ್ಛೆ ಜಾಗ್ರತವಾಗಿತ್ತು. ಎರಣ್ ಅಕ್ಕಪಕ್ಕ ‘ಸತಿ ಕಲ್ಲು’ ನೋಡಿದ್ದೆ. ಋಷಭ್ ಅವುಗಳ ಬಗ್ಗೆ ಹೇಳಿದಾಗ ನನ್ನ ಮನಸ್ಸಿನಲ್ಲಿ ಅವುಗಳ ಬಗ್ಗೆ ಜುಗುಪ್ಸೆ ಹುಟ್ಟಿತ್ತು. ಮೊದಲು ಜೀವಂತವಾಗಿ ಸುಟ್ಟು ಸಾಯಲು ಒತ್ತಡ ಹೇರುವುದು, ನಂತರ ಅವಳ ಆತ್ಮಹತ್ಯೆ ಅಥವಾ ಹತ್ಯೆಯನ್ನು ‘ಸತಿ’ಯಾಗಿ ವಿಜೃಂಭಿಸುವುದು ಪುರುಷಪ್ರಧಾನ ಸಮಾಜ ಹೆಣ್ಣಿನ ವಿರುದ್ಧ ಮಾಡುವ ಷಡ್ಯಂತ್ರವಲ್ಲದೆ ಮತ್ತೇನು?

‘ನೀವೇಕೆ ಪ್ರತಿಯೊಂದನ್ನು ಮಹಿಳೆ ಪುರುಷರಲ್ಲಿ ಹಂಚಿ ನೋಡುತ್ತೀರ?’ ವಿಶಾಲ್ ತಡೆದ.

‘ನಾನು ನೋಡಲು ಬಯಸುವುದಿಲ್ಲ, ಆದರೆ ಸಮಾಜ ಹೀಗೆ ನೋಡಲು ವಿವಶಗೊಳಿಸುತ್ತದೆ. ನೀವೇ ಹೇಳಿ, ನಾನು ಹೆಣ್ಣು, ಹೀಗಾಗಿ ರಾತ್ರಿ ವೇಳೆಯಲ್ಲಿ ಒಂಟಿಯಾಗಿ ಮನೆಯಿಂದ ಹೊರಗೆ ಹೋಗಲಾರೆ. ನನಗೆ ಯಾರಿಂದ ಅಪಾಯವಿದೆ? ಪುರುಷರಿಂದ ಅಲ್ಲವೇ? ರಾತ್ರಿ ವೇಳೆಯಲ್ಲಿ ನಾನು ಮನೆಯಿಂದ ಹೊರಗಿರುವುದನ್ನು ನೋಡಿ ಅವರು ನನ್ನ ಮೇಲೆ ಎರಗುತ್ತಾರೆ. ಹೀಗಾಗಿ ರಾತ್ರಿ ವೇಳೆಯಲ್ಲಿ ನಾನು ಮನೆಯಿಂದ ಹೊರಗೆ ಒಂಟಿಯಾಗಿ ಹೋಗಬಾರದು. ಆದ್ರೆ ನೀವು ರಾತ್ರಿ ಯಾವುದೇ ವೇಳೆಯಲ್ಲಿ ಮನೆಯಿಂದ ಹೊರಗೆ ಹೋಗಬಲ್ಲಿರಿ, ಏಕೆಂದರೆ ನೀವು ಪುರುಷರು. ನಿಮ್ಮ ಹಣವನ್ನು ಕಿತ್ತುಕೊಳ್ಳಲು ಪುರುಷನೊಬ್ಬ ನಿಮ್ಮ ಮೇಲೆ ಆಕ್ರಮಣ ಮಾಡಬಹುದು, ಆದರೆ ಯಾವ ಹೆಣ್ಣು ಸಹ ನಿಮ್ಮನ್ನು ತುಳಿಯಲು ನಿಮ್ಮ ಮೇಲೆ ಆಕ್ರಮಣವೆಸಗುವುದಿಲ್ಲ. ಹೇಳಿ, ನಾನು ತಪ್ಪು ಹೇಳ್ತಿದ್ದೇನೆಯೇ?’ ನಾನು ವಿಶಾಲನನ್ನು ಕೇಳಿದೆ.

‘ನೀವು ಹೇಳ್ತಿರೋದು ನಿಜ’.

‘ಪ್ರಕೃತಿ ಹೆಣ್ಣಿಗೆ ವಿಶೇಷ ದೇಹವನ್ನು ಕೊಟ್ಟಿದೆ, ಆ ವಿಶೇಷತೆಗಳನ್ನು ಪುರುಷ, ಮಹಿಳೆಯ ವಿರುದ್ಧ ಶತಮಾನಗಳಿಂದ ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾನೆ. ಅವನು ಹೆಣ್ಣಿಗೆ, ಪ್ರಕೃತಿ ನಿನಗೆ ಗರ್ಭಿಣಿಯಾಗುವ ವಿಶೇಷತೆಯನ್ನು ಕೊಟ್ಟಿದೆ, ಅದರಿಂದ ನಾನು ನಿನ್ನನ್ನು ‘ಕಳಂಕಿನಿ’ಯನ್ನಾಗಿ ಮಾಡುತ್ತೇನೆ. ನಾವಿಬ್ಬರು ಸೆಕ್ಸ್ ಮಾಡೋಣ, ಆದ್ರೆ ನೀನು ಮಾತ್ರ ಕಳಂಕಿನಿಯಾಗುತ್ತೀಯ ಎಂದು ಹೆದರಿಸುತ್ತಾನೆ. ಈಗ ನೋಡಿ, ಒಂದು ವೇಳೆ ಕುಮಾರಿಯೊಬ್ಬಳು ತಾಯಿಯಾದರೆ, ಸಮಾಜ ಅವಳ ಬದುಕನ್ನೇ ನರಕ ಮಾಡುತ್ತದೆ. ಅವಳು ಸಮಾಜದ ಭಯದಿಂದ ತನ್ನ ನವಜಾತ ಶಿಶುವನ್ನು ತ್ಯಜಿಸಿದರೆ, ಪತ್ರಿಕೆಗಳಲ್ಲಿ ‘ಒಬ್ಬ ಕಲ್ಲು ಮನಸ್ಸಿನ ತಾಯಿ ತನ್ನ ನವಜಾತ ಶಿಶುವನ್ನು ಎಸೆದಳು’ ಎಂದೇ ಶೀರ್ಷಿಕೆಯನ್ನು ಕೊಡಲಾಗುತ್ತದೆ. ಆದರೆ ಆಗ ಅವಳ ಬಗ್ಗೆ ಆ ಕುಮಾರಿಯನ್ನು ಗರ್ಭಿಣಿ